# ಚುನಾವಣೆ ಮುಂದೂಡಲು ಸರ್ಕಾರದಿಂದ ಶತಪ್ರಯತ್ನ

ವಿ. ವಾ. 11-12-20

■ ಸತೀಶ್ ಕಂದಗಲ್‌ಪುರ ಬೆಂಗಳೂರು

ಬಿಬಿಎಂಪಿ ಚುನಾವಣೆ ಮುಂದೂಡಲು ಸರ್ಕಾರ ಶತಪ್ರಯತ್ನ ಮುಂದುವರಿಸಿದೆ. ಪಾಲಿಕೆಗೆ ಹೊಸ ಕಾಯ್ದೆ ಜಾರಿಗೊಳಿಸುವ ಮೂಲಕ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಮತ್ತಷ್ಟು ಅಸ್ತ್ರಗಳನ್ನು ಬಲಪಡಿಸಿಕೊಳ್ಳುತ್ತಿದೆ.

» ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಸಿದ್ಧತೆ

» ಬಿಬಿಎಂಪಿ ಹೊಸ ಕಾಯ್ದೆ ಅನುಷ್ಠಾನ

ಬಿಬಿಎಂಪಿ ಚುನಾವಣೆ ನಡೆಸಬೇಕೋ- ಬೇಡವೋ ಎಂಬುದರ ಬಗ್ಗೆ ಐದಾರು ತಿಂಗಳಿಂದ ಚರ್ಚೆ ನಡೆಯುತ್ತಿತ್ತು. ಪಾಲಿಕೆ ಸದಸ್ಯರ ಆಡಳಿತಾವಧಿ ಸೆ.10ಕ್ಕೆ ಅಂತ್ಯವಾದ ತಕ್ಷಣವೇ ಚುನಾವಣೆ ನಡೆಸುವಂತೆ ಕಾಂಗ್ರೆಸ್‌ನ ಮಾಜಿ ಕಾರ್ಪೊರೇಟರ್‌ಗಳು ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿದ್ದರು. ಈ ಕುರಿತು ವಿಚಾರಣೆ ನಡೆದು, ಕೊನೆಗೆ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಇತ್ತೀಚೆಗೆ ಹೈಕೋರ್ಟ್ ಆದೇಶಿಸಿತು. ಜತೆಗೆ, ತಿಂಗಳ ಒಳಗಾಗಿ ಅಂತಿಮ ಮೀಸಲಾತಿ ಪಟ್ಟಿ ಹಾಗೂ 6 ವಾರಗಳಲ್ಲಿ ಚುನಾವಣೆ ಘೋಷಿಸುವಂತೆ ಸರ್ಕಾರಕ್ಕೆ ಸೂಚಿಸಿತ್ತು. ಹೈಕೋರ್ಟ್ ತೀರ್ಪಿನಿಂದ ಚುನಾವಣೆ ಮುಂದೂಡುವ ಅವಕಾಶ ಕೈತಪ್ಪಿದ್ದರಿಂದ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಹೋಗಲು ಎಲ್ಲ ತಯಾರಿ ಮಾಡಿಕೊಳ್ಳುತ್ತಿದೆ. ಪಾಲಿಕೆ ವ್ಯಾಪ್ತಿಯಲ್ಲಿ 27 ವಿಧಾನಸಭಾ ಕ್ಷೇತ್ರದ ಬಹುತೇಕ ಶಾಸಕರಿಗೆ ಚುನಾವಣೆ ನಡೆಯುವುದು ಇಷ್ಟವಿಲ್ಲ. ಅಭಿವೃದ್ಧಿ ಹೆಸರಿನಲ್ಲಿ ಚುನಾವಣೆ ಮುಂದೂಡಿದರೆ ಶಾಸಕರ ಮತ್ತು ಜನರ ನಡುವಿದ್ದ ಕಾರ್ಪೊರೇಟರ್ ಎಂಬ ಅಂತರ ಕಳಚಿಹೋಗುತ್ತದೆ. ಕ್ಷೇತ್ರದಲ್ಲಿ ಸ್ಥಳೀಯ ಶಾಸಕರು ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಲು ಮಹದವಕಾಶ ದೊರೆತಂತಾಗಿದ್ದು, ಚುನಾವಣೆ ಮುಂದೂಡುತ್ತಿದ್ದಾರೆ ಎಂದು ಹೆಸರೇಳಲಿಚ್ಛಿಸದ ಮಾಜಿ ಕಾರ್ಪೊರೇಟರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

> ಅಭಿವೃದ್ಧಿ ದೃಷ್ಟಿಕೋನದಿಂದ ಸರ್ಕಾರ ಕಾನೂನು ಜಾರಿಗೆ ತರುವುದನ್ನು ತಡೆಯುವ ಅಧಿಕಾರ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ. ಜತೆಗೆ, ಪಾಲಿಕೆಗೆ ಪ್ರತ್ಯೇಕ ಹೊಸ ಕಾಯ್ದೆ ಅಂಗೀಕಾರ ಆಗಿರುವುದನ್ನು ಮುಂದಿಟ್ಟುಕೊಂಡು ಹೈಕೋರ್ಟ್ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರ ಬಿಬಿಎಂಪಿ ಚುನಾವಣೆ ಮುಂದೂಡುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಬಹುದು.
>
> | ಅಶೋಕ್ ಹಾರ್ನಹಳ್ಳಿ
> ಹಿರಿಯ ವಕೀಲ

## ಸುಪ್ರೀಂಕೋರ್ಟ್ ಮೊರೆ ಹೋಗಲು ಇರುವ ಅಸ್ತ್ರಗಳೇನು?

● ಬಿಬಿಎಂಪಿಗೆ ವ್ಯಾಪ್ತಿ, ಜನಸಂಖ್ಯೆ ಹೆಚ್ಚಾಗುತ್ತಿದ್ದು, ಮೂಲಸೌಕರ್ಯ ಮತ್ತು ಅಭಿವೃದ್ಧಿ ಮಾಡಲು ಹಿನ್ನಡೆಯಾಗುತ್ತಿದೆ. ಜನಸಂಖ್ಯೆಗೆ ಅನುಗುಣವಾಗಿ ಅಭಿವೃದ್ಧಿ ಯೋಜನೆ ರೂಪಿಸಲು 198 ವಾರ್ಡ್‌ಗಳನ್ನು 243ಕ್ಕೆ ಹೆಚ್ಚಿಸಿ ಕಾಯ್ದೆ ಮಾಡಲಾಗಿದೆ. ಜತೆಗೆ, 243 ವಾರ್ಡ್ ಗಳ ಹೆಚ್ಚಳದ ಕಾಯ್ದೆ ಬಗ್ಗೆ ಹೈಕೋರ್ಟ್ ಆಕ್ಷೇಪವೆತ್ತಿದೆ, ಅದನ್ನು ಮುಂದಿನ ಚುನಾವಣೆಗೆ ಅನ್ವಯ ಮಾಡುವಂತೆ ಸೂಚಿಸಿದೆ. ಆದರೆ, ಒಮ್ಮೆ ಚುನಾವಣೆ ನಡೆದರೆ 5 ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಹಿನ್ನಡೆಯಾಗುತ್ತದೆ. ● ಅಧಿಕಾರ ಪೂರ್ಣಗೊಳ್ಳುವ ಆರು ತಿಂಗಳ ಮುಂಚಿತವಾಗಿ ಚುನಾವಣಾ ಕಾರ್ಯ ಕೈಗೊಳ್ಳಬೇಕು. ಆದರೆ, ವಾರ್ಡ್ ಹೆಚ್ಚಳ, ಮರುವಿಂಗಡಣೆ ಹಾಗೂ ಹೊಸ ಕಾಯ್ದೆ ರಚನೆ ಕಾರ್ಯಕ್ಕೆ ಕೋವಿಡ್ ಸೋಂಕಿನಿಂದ ಹಿನ್ನಡೆಯಾಗಿದೆ. ● ಪಾಲಿಕೆಗೆ ಹೊಸ ಕಾಯ್ದೆಗೆ ಸರ್ಕಾರದ ಎರಡೂ ಸದನದಲ್ಲಿ ಒಪ್ಪಿಗೆ ಸಿಕ್ಕಿದೆ. ಬಹುತೇಕವಾಗಿ ರಾಜ್ಯಪಾಲರ ಅಂಕಿತವೂ ಬೀಳುವ ಸಾಧ್ಯತೆಯಿದ್ದು, ಹೊಸ ಕಾಯ್ದೆ ಜಾರಿಯಾಗುವ ಎಲ್ಲ ಸಾಧ್ಯತೆಯಿದೆ. ಹೊಸ ಕಾಯ್ದೆ ಅಂಗೀಕಾರವಾದರೆ, ಹಳೆಯ ಕೆಎಂಸಿ-1976 ಬಿಬಿಎಂಪಿ ಕಾಯ್ದೆಗೆ ಮಾನ್ಯತೆ ಕಳೆದುಕೊಳ್ಳುತ್ತದೆ. ಮಾನ್ಯತೆಯಿಲ್ಲದ ಕಾಯ್ದೆ ಅನುಸಾರ ಚುನಾವಣೆ ನಡೆಸುವದು ಅಸಾಧ್ಯ.

Editor: CHANNEGOWDA K.N. Published by CHANNEGOWDA K.N. on behalf of VRL I
... Industrial Area, BENGALURU ...